ಪ್ರಕಟಣೆ ಮಾಡಿ ಅದಕ್ಕೆ ಸ್ಟೇ ಆರ್ಡರ್ ಸಿಗುವ ಹಾಗೆ ಮಾಡುತ್ತಿದ್ದಾರೆ. ಒಂದು ಸಲ ವಿತಿನ್ 15 ಡೇಸ್ ನೋಟೀಸ್ ಕೊಡದೇ ಸ್ಟೇ ಆಯಿತು. ಓಟರ್ಸ್ ಪಟ್ಟಿ ಸರಿಯಾಗಿ ಮಾಡದೇ ಸ್ಟೇ ಆಯಿತು. ಸನ್ಮಾನ್ಯ ಸಚಿವರು ಓಟರ್ಸ್ ಪಟ್ಟಿ ಬಗ್ಗೆ ಹೇಳಿದರು. ಈ ಓಟರ್ಸ್ ಪಟ್ಟಿಯನ್ನು ಸರ್ಕಾರವೇ ಏಕೆ ಮಾಡಬಾರದು, ಹಿಂದಿನ ಚುನಾವಣೆಯ ಓಟರ್ ಪಟ್ಟಿಯಲ್ಲಿ ಯಾವ ಯಾವ ಗ್ರೂಪ್‌ಗೆ ಸೇರಬೇಕೋ ಅದನ್ನು ಬದಲಾವಣೆ ಮಾಡುತ್ತಾರೆ. ಆ ಬದಲಾವಣೆ ಆಗದೇ ಇರುವ ಹಾಗೆ ನೋಡಿಕೊಳ್ಳಬೇಕು. ಮೊನ್ನೆ ಚುನಾವಣೆ ನಡೆದಿದೆ, ರಿಸಲ್ಟ್ ಪ್ರಕಟಣೆಗೆ ತಡೆಯಾಗಿದೆ. ಹೀಗೆ ಆಗುವುದು ಸರಿಯಲ್ಲ, ಆದ್ದರಿಂದ ಸರಿಯಾದ ಕ್ರಮ ಕೈಗೊಳ್ಳಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಹೇಳಿದ್ದೇನೆ ಹಾಗೇನಾದರೂ ಇನ್ ಎಲಿಜಿಬಲ್ ಆಗಿ ಓಟರ್ಸ್ ಬಂದಿದ್ದರೆ, ಎಲೆಕ್ಷನ್ ಪ್ರೊಸೀಜರ್‌ನಲ್ಲಿ ತಪ್ಪಾಗಿದ್ದರೆ ಅದನ್ನು ಸಂಪೂರ್ಣವಾಗಿ ಎನ್‌ಕ್ವೈರಿ ಮಾಡಿಸುತ್ತೇನೆ. ಏನಾದರೂ ತಪ್ಪು ಕಂಡು ಬಂದರೆ I will take further action ..... ತಕ್ಷಣ ಸೂಪರ್‌ಸೀಡ್ ಮಾಡುವುದೆಂದರೆ ಅದು ಆಗುವುದಿಲ್ಲ.

<u>ವಿಷಯ : ಉತ್ತರ ಕನ್ನಡ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕಿನಲ್ಲಿನ ಷೇರು ಮೊತ್ತ.</u>

1375

ಶ್ರೀ ಆರ್.ಎನ್. ನಾಯಕ್ (ಭಟ್ಕಳ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕಿನಲ್ಲಿ ಸರಕಾರ ಹೊರಡಿಸಿರುವ ತನ್ನ ಪಾಲಿನ ಷೇರು ಮೊತ್ತವೆಷ್ಟು?
ಆ) ಬ್ಯಾಂಕು ಆಡಳಿತ ಸರಕಾರದ ಶೇರನ್ನು ಹಿಂದಕ್ಕೆ ಕೊಡಲು ತೀರ್ಮಾನಿಸಿದೆಯೇ?
ಇ) ತೀರ್ಮಾನಿಸಿದ್ದರೆ ಅದಕ್ಕೆ ಕಾರಣಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ರೂ. 36.11 ಲಕ್ಷ
ಆ) ಹೌದು.
ಇ) ಸರಕಾರ, ಉತ್ತರ ಕನ್ನಡ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕಿಗೆ ಶೇರು ಬಂಡವಾಳ ಮಂಜೂರು ಮಾಡುವಾಗ ವಿಧಿಸಿದ್ದ ಕರಾರುಗಳ ಪ್ರಕಾರ, ಬ್ಯಾಂಕು ಮಂಜೂರಾದ ಶೇರುಗಳನ್ನು ಸರ್ಕಾರಕ್ಕೆ ಹಿಂತಿರುಗಿಸಿರುತ್ತದೆ.

ಶ್ರೀ ಆರ್. ಎಸ್. ನಾಯಕ್ : ಅಧ್ಯಕ್ಷರೇ, ಈ ಉತ್ತರ ನೋಡಿದರೆ ನನಗೆ ಏನೂ ಸಮಾಧಾನ ಆಗಿಲ್ಲ. ನಾನು ಕೇಳಿದ ಉದ್ದೇಶ ಏನು ಎಂದರೆ ಉತ್ತರ ಕನ್ನಡ ಜಿಲ್ಲೆಯ ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಸರ್ಕಾರದ ಷೇರ್ ಇದ್ದರೆ ಮಾತ್ರ ಸರ್ಕಾರಕ್ಕೆ ಆ ಬ್ಯಾಂಕ್‌ನ ವ್ಯವಹಾರದ ಮೇಲೆ ಹಿಡಿತ ಇರುತ್ತದೆ. ನೀವು ಷೇರ್‌ಅನ್ನು ಹಿಂದಕ್ಕೆ ಪಡೆದುಕೊಂಡರೆ ಸರ್ಕಾರಕ್ಕೆ ಏನಾದರೂ ಹಿಡಿತ ಇರುತ್ತದೆಯೇ? ಹೇಗೆ? ಅಥವಾ ಇರುವುದಿಲ್ಲವೋ? ಎರಡನೆಯದು ಈ ಹಣವನ್ನು ಏಕೆ ಹಿಂತಿರುಗಿಸಿದ್ದಾರೆಂದರೆ ಕಳೆದ ಸಲ ಸಿರಸಿ ಡಿ.ಸಿ.ಸಿ. ಬ್ಯಾಂಕ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಸುಮಾರು 20 ವರ್ಷದ ನಂತರ ಒಂದೇ ಸ್ಥಾನದಲ್ಲಿ ಕುಳಿತಿದ್ದಾಗ ಅವರ ಟ್ರಾನ್ಸ್‌ಫರ್ ಆಯಿತು.

ಸರ್ಕಾರದ ಷೇರು ಆ ಬ್ಯಾಂಕಿನಲ್ಲಿ ಇದ್ದರೆ ಮಾತ್ರ ಆ ಬ್ಯಾಂಕಿನ ಅಧಿಕಾರಿಯನ್ನು ವರ್ಗಾಯಿಸಿ, ಮತ್ತೊಬ್ಬ ಅಧಿಕಾರಿಯನ್ನು ಅಲ್ಲಿಗೆ ಹಾಕಲು ಸಾಧ್ಯವಾಗುತ್ತದೆ. ಹೀಗೆ ಬೇರೆ ಅಧಿಕಾರಿಯನ್ನು ಆ ಡಿ.ಸಿ.ಸಿ. ಬ್ಯಾಂಕಿನಲ್ಲಿ ಹಾಕಿದ್ದರಿಂದ ಅವರು ಎಲ್ಲಾ ಸೇರಿಕೊಂಡು ಸರ್ಕಾರದ ಷೇರು ಹಣವನ್ನು ಕೊಟ್ಟರೆ ತಾವು ಅಲಖ್‌ನಿರಂಜನ್ ಆಗಬಹುದು, ಏನು ಬೇಕಾದರೂ ಮಾಡಿಕೊಂಡು ಹೋಗಬಹುದು ಎಂಬ ಉದ್ದೇಶದಿಂದ ಸರ್ಕಾರದ ಷೇರನ್ನು ಹಿಂದಕ್ಕೆ ಕೊಟ್ಟಿದ್ದಾರೆ. ಇದು ಹೌದೋ ? ಅಲ್ಲವೋ? ಹೀಗೆ ಆಗುವುದರಿಂದ ಡಿ.ಸಿ.ಸಿ. ಬ್ಯಾಂಕಿನಲ್ಲಿ ಏನಾಗಿದೆ ಎಂದರೆ ಅಲ್ಲಿ ಕೆಲವೊಂದು ಮೇಲುವರ್ಗದವರ ಒಂದು ಹಿಡಿತಕ್ಕೆ ಆ ಬ್ಯಾಂಕ್ ಸಿಕ್ಕಿರುವುದರಿಂದ ತೊಂದರೆ ಉಂಟಾಗಿದೆ. ನೀವು ಅಲ್ಲಿಯ ಲೆಕ್ಕ ಪತ್ರಗಳನ್ನು ತೆಗೆದು ನೋಡಿ ಗೊತ್ತಾಗುತ್ತದೆ. ನೇಮಕಾತಿಯನ್ನು ತೆಗೆದುಕೊಳ್ಳುವುದರಲ್ಲಾಗಲಿ ಸಾಲ ಕೊಡುವುದರಲ್ಲಾಗಲಿ ಎಸ್.ಸಿ.ಎಸ್.ಟಿ.ಗಳಿಗೆ ಹಾಗೂ ಹಿಂದುಳಿದ ವರ್ಗದವರಿಗೆ, ಕ್ರಿಶ್ಚಿಯನ್ನರಿಗೆ, ಮುಸ್ಲಿಮರಿಗೆ ಹಾಗೂ ಇತರ ಜನಾಂಗದವರಿಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕಿಲ್ಲ. ಆದ್ದರಿಂದ ಸರ್ಕಾರ ಷೇರನ್ನು ಹಿಂದಕ್ಕೆ ತೆಗೆದುಕೊಳ್ಳಬಾರದು, ಇದು ನನ್ನ ವಾದ. ಅದಕ್ಕೆ ತಮ್ಮ ಅಭಿಪ್ರಾಯವನ್ನು ಹೇಳಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್ಕಾರ ಷೇರು ಹಣವನ್ನು ವಾಪಸ್ ತೆಗೆದುಕೊಳ್ಳಬಾರದು ಎಂಬ ವಾದವನ್ನು ನಾನೂ ಕೂಡ ಒಪ್ಪುತ್ತೇನೆ. ಆದರೆ ಹಿಂದೆ 1967 ರಲ್ಲಿ ಸರ್ಕಾರದಿಂದ ಆರ್ಡರ್ ಹೊರಡಿಸಿ, ಶೇರು ಅಮೌಂಟ್ ಏನು ಈ ನಾರ್ತ್ ಕೆನರಾ ಬ್ಯಾಂಕ್ ಮತ್ತು ಬಿಜಾಪುರ ಬ್ಯಾಂಕ್‌ನಲ್ಲಿ ಏನು ಸರ್ಕಾರ ಕೊಟ್ಟಿದ್ದರೋ, ಅದು ಸುಮಾರು 12 ವರ್ಷಗಳಲ್ಲಿ ಹತ್ತು ಕಂತುಗಳಲ್ಲಿ ವರ್ಷ ವರ್ಷ ಕಟ್ಟಿಕೊಂಡು ಈಕ್ವಲ್ ಇನ್‌ಸ್ಟಾಲ್‌ಮೆಂಟಿನಲ್ಲಿ ಕಟ್ಟಬೇಕೆಂದು 36 ಲಕ್ಷ ರೂ.ಗಳನ್ನು ಅವರಿಗೆ ಮಂಜೂರು ಮಾಡಿದರು. ಅದರ ಪ್ರಕಾರ 87 ರಲ್ಲಿ ಸರ್ಕಾರದ ವತಿಯಿಂದ ಒಂದು ಪತ್ರವನ್ನು ಬರೆದು ನೀವು ನಮ್ಮ ಷೇರು ಅಮೌಂಟನ್ನು ವಾಪಸ್ ಕೊಡಿ ಎಂದು ಸರ್ಕಾರದವರು ಕೇಳಿದ ಮೇಲೆ ಆ ಹಣವನ್ನು ಅವರು 91-92ರಲ್ಲಿ ಕೊಟ್ಟಿದ್ದಾರೆ. ಆದ್ದರಿಂದ ಅವರು ಹೇಳಿದ ಹಾಗೆ ಇರಬಹುದು. ಏನೆಂದರೆ ಷೇರು ಹಣ ವಾಪಸ್ಸು ಮಾಡಿದರೆ 3ನೇ ಒಂದು ಭಾಗ ನಾಮಿನೇಷನ್ ಸೆಕ್ಷನ್ 59ರ ಕೆಳಗೆ ಮಾಡತಕ್ಕದ್ದು ತಪ್ಪಿ ಹೋಗುತ್ತದೆ ಎನ್ನತಕ್ಕ ದೃಷ್ಟಿ ಇರಬಹುದು. ಎರಡನೆಯದಾಗಿ ಅವರು ಹೇಳಿದ ಹಾಗೆ ನಮಗೆ ಬೇಕಾದಂತಹ ಎಂ.ಡಿ.ಗಳನ್ನು ಇಟ್ಟುಕೊಳ್ಳಬಹುದು. ಅಪಾಯಿಂಟ್‌ಮೆಂಟ್‌ಗಳಲ್ಲಿ ರೋಸ್ಟರ್ ಸಿಸ್ಟಮನ್ನು ಫಾಲೋ ಮಾಡತಕ್ಕದ್ದನ್ನೂ ಕೂಡ ತಪ್ಪಿಸಬಹುದು ಎಂಬ ದೃಷ್ಟಿಯಿಂದ ಅವರು ವಾಪಸ್ಸು ಮಾಡಿರಬಹುದು. ಅವರು ಒಬ್ಬರೇ ಅಲ್ಲ ಇವೊತ್ತು ಇನ್ನು ಬೇರೆ ಒಂದೆರಡು ಜಿಲ್ಲೆಗಳಲ್ಲಿ ಇದೇ ರೀತಿ ಮಾಡಿದ್ದಾರೆ. ಆದ್ದರಿಂದ ನಾನು ಲಾ ಡಿಪಾರ್ಟ್‌ಮೆಂಟ್ ಜೊತೆಯಲ್ಲಿ ಚರ್ಚೆ ಮಾಡಿ ಯಾವ ರೀತಿ ಸರ್ಕಾರದ ಹಿಡಿತ ಇರಬೇಕು ಮತ್ತು ಅವರಿಗೆ ಹೆರೇಸ್‌ಮೆಂಟ್ ಕೂಡ ಆಗಬಾರದು, ಹಾಗೂ ಸರ್ಕಾರದ ಪಾಲಿಸಿಸ್ ಅಂಡ್ ಪ್ರೋಗ್ರಾಮುಗಳನ್ನು ಅವರು ಇಂಪ್ಲಿಮೆಂಟ್ ಮಾಡಬೇಕು. ಆ ದೃಷ್ಟಿಯಿಂದ ನಾನು ಚರ್ಚೆ ಮಾಡಿ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಯೋಚನೆ ಮಾಡುತ್ತೇನೆ. ಒಂದು ವೇಳೆ ಅವರ ಷೇರು ಹಣವನ್ನು ವಾಪಸ್ ಕೊಟ್ಟರೂ ಸಹ ಸರ್ಕಾರದ ಪ್ರೋಗ್ರಾಮಗಳನ್ನು ಪಾಲಿಸಿಗಳನ್ನು ಇಂಪ್ಲಿಮೆಂಟ್ ಮಾಡುವುದರಲ್ಲಿ ಯಾವ ರೀತಿ ಹಿಡಿತ ಇರಬೇಕು ಎಂಬ ಬಗ್ಗೆಯೂ ಸಹ ನಾನು ಸಂಪೂರ್ಣ ಪರಿಶೀಲನೆ ಮಾಡುತ್ತೇನೆ.

ಶ್ರೀ ಆರ್. ಎನ್. ನಾಯಕ : ಮಂತ್ರಿಯವರು ಇದರ ಬಗ್ಗೆ ಲಕ್ಷ ವಹಿಸಿರುವುದರಿಂದ ನನಗೆ ಈಗ ಸ್ವಲ್ಪ ಸಮಾಧಾನವಾಗಿದೆ. ಷೇರು ಅಮೌಂಟನ್ನು ಸರ್ಕಾರ ಹಿಂದಕ್ಕೆ ತೆಗೆದುಕೊಂಡ ಮೇಲೂ ಸಹ, ಈಗ ಏನು ಸರ್ಕಾರದ ಹಿಡಿತ ಇದೆಯೋ ಹಾಗೆಯೇ ಆ ಬ್ಯಾಂಕ್‌ಗಳ ಮೇಲೆ ಸರ್ಕಾರ ತನ್ನ ಹಿಡಿತ ಸಾಧಿಸಿದೆ ಅದನ್ನು ಉಳಿಸಿಕೊಳ್ಳಲು ಸಾಧಿಸುವುದಕ್ಕೆ ಹಾಗೆಯೇ

ಸರ್ಕ್ಯೂಲರ್ ಕಾನೂನು ಅಥವಾ ಚೇಂಜ್ ಮಾಡಲು ಸಾಧ್ಯವಿದೆಯೇ? ಇದನ್ನು ಎಷ್ಟು ದಿವಸಗಳಲ್ಲಿ ಮಾಡುತ್ತಾರೆ ಎಂಬುದನ್ನು ದಯವಿಟ್ಟು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ಸ್ಪಷ್ಟಪಡಿಸಿದ್ದೇನೆ ಯಾವ ಯಾವ ಬ್ಯಾಂಕುಗಳಲ್ಲಿ ಸರ್ಕಾರಿ ರೂಲ್ಸ್‌ಗಳನ್ನು ವ್ಯಯಲೇಟ್ ಮಾಡಿದ್ದಾರೆ ಅಥವಾ ಸರ್ಕಾರದ ಆದೇಶವನ್ನು ಅವರು ಪರಿಪಾಲನೆ ಮಾಡುವುದಿಲ್ಲ ಖಂಡಿತವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅದು ಯಾವುದೇ ಬ್ಯಾಂಕ್ ಇರಬಹುದು. ಮಾನ್ಯ ಸದಸ್ಯರು ಹೇಳಿದ ವಿಚಾರಗಳ ಬಗ್ಗೆ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇನೆ.

ವಿಷಯ : ಸೇಡಂ ತಾಲ್ಲೂಕಿನ ಚಂದಾಪುರದ ಕಟ್ಟಡಗಳಲ್ಲಿ ಸೋರುವಿಕೆ.

1384
ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಕ್ಕರೆ ಮತ್ತು ಭೂ ಸೇನಾ ನಿಗಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಚಂದಾಪುರ ಗ್ರಾಮದಲ್ಲಿ ಭೂ ಸೇನಾ ನಿಗಮದವರು ಲಕ್ಷಾನುಗಟ್ಟಲೇ ಹಣವನ್ನು ಪಡೆದು ಹೊಸದಾಗಿ ನಿರ್ಮಾಣ ಮಾಡಿರುವ ಮೂರು ಕೋಣೆಗಳು ಅಲ್ಪಸ್ವಲ್ಪ ಮಳೆಯಿಂದಲೇ ಪೂರ್ತಿ ಸೋರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಆ) ಈ ಕೋಣೆಗಳ ನಿರ್ಮಾಣಕ್ಕಾಗಿ ಸರ್ಕಾರದವರು ನೀಡಿರುವ ಹಣವೆಷ್ಟು?
ಇ) ಮೂರು ಕೋಣೆಗಳು ತಯಾರು ಮಾಡಿದ್ದು ಮೊದಲಿನ ಶಾಲೆ ಕಟ್ಟಡದ ಹಳೇ ಕಲ್ಲುಗಳಿಂದ ಕಟ್ಟಿಲ್ಲವೇ?
ಈ) ಹಳೇ ಕಲ್ಲುಗಳನ್ನು ಈ ಶಾಲೆಯ ಕಟ್ಟಡಕ್ಕೆ ಉಪಯೋಗಿಸಿದರೆ ಅವರ ಬಿಲ್‌ನಲ್ಲಿ ಈ ಕಲ್ಲುಗಳ ಬೆಲೆ ವಜಾ ಮಾಡಿದ್ದರೆ, ವಜಾ ಮಾಡಿರುವ ಹಣವೆಷ್ಟು?
ಉ) ಒಂದು ವೇಳೆ ಕಲ್ಲುಗಳ ಬೆಲೆ ವಜಾ ಮಾಡದಿದ್ದರೆ ವಜಾ ಮಾಡಿ ಈ ಶಾಲೆ ಕೋಣೆಗಳು ಸೋರದಂತೆ ವ್ಯವಸ್ಥೆ ಮಾಡಿ ಇದನ್ನು ವೀಕ್ಷಿಸಿದ ನಂತರವೇ ಶಿಕ್ಷಣ ಇಲಾಖೆಗೆ ಒಪ್ಪಿಸಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡುವುದು ಯಾವಾಗ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೌದು. ಛತ್ತನ್ನು ಹಾಕಿದ ಮರುದಿವಸ ಬಂದ ಮಳೆಯಿಂದಾಗಿ ಜಲ ನಿರೋಧಕ ಪ್ಲಾಸ್ಟ್ರಿಂಗ್ ಮಾಡದ ಕಾರಣ ಸೋರಿತ್ತು. ಆಮೇಲೆ ಜಲ ನಿರೋಧಕ ಪ್ಲಾಸ್ಟ್ರಿಂಗ್ ಮಾಡಿ ಪೂರ್ತಿ ಸೋರದಂತೆ ವ್ಯವಸ್ಥೆ ಮಾಡಲಾಗಿದೆ.
ಆ) ರೂ. 2.360 ಲಕ್ಷಗಳು
ಇ) ಹೌದು.
ಈ) ಹಳೇ ಕಲ್ಲಿನ ವೆಚ್ಚವನ್ನು ವಜಾ ಮಾಡಿರಲಿಲ್ಲಾ.
ಉ) ಹಳೇ ಕಲ್ಲಿನ ವೆಚ್ಚವನ್ನು ಅಂತಿಮ ಬಿಲ್ಲಿನಲ್ಲಿ ವಜಾ ಮಾಡಲಾಗುವುದು ಮತ್ತು ಶಾಲೆಯ ಕೋಣೆಗಳನ್ನು ಸೋರದಂತೆ ವ್ಯವಸ್ಥೆ ಈಗಾಗಲೇ ಮಾಡಲಾಗಿದೆ. ಹಾಗೂ ಶಾಲೆಯನ್ನು ಶಿಕ್ಷಣ ಇಲಾಖೆಯೊಂದಿಗೆ ಜಂಟಿಯಾಗಿ ವೀಕ್ಷಿಸಿ ಮಾರ್ಚ್ 93ರೊಳಗೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಒದಗಿಸಲಾಗುವುದು.